ಎಂ ವಿ ಸಿ ಸಂಖ್ಯೆಃ**22 /2024** ಪಿ .ಡಬ್ಲ್ಯೂಃ**3**
ಸಾಕ್ಷಿಯನ್ನು ದಿಃ **16.09.2025** ರಂದು ಕರೆಸಿ ಪ್ರಮಾಣೀಕರಿಸಲಾಯಿತು.
**ಪಾಟೀ ಸವಾಲು ಎದುರುದಾರರ ಪರ ಶ್ರೀಮತಿ ಆರ್ ಕೆ ವಕೀಲರಿಂದಃ-**

ನನಗೆ ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುವಂತೆ ಯಾವುದೇ ಸಮನ್ಸ್ ಬಂದಿಲ್ಲ. ಮೃತ ವಿನಯ್ ರಾಜ್ ರವರ ತಾಯಿ ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ನಾನು ಮತ್ತು ಮೃತ ವಿನಯ್ ರಾಜ್ ಇಬ್ಬರು ಬಾಲ್ಯ ಸ್ನೇಹಿತರಾಗಿದ್ದೆವು. ಮೃತ ವಿನಯ್ ರಾಜ್ ಡಿಗ್ರಿ ಓದಿ ಮುಗಿಸಿದ್ದಾನೆ ಎಂದು ಮಾತ್ರ ನನಗೆ ಗೊತ್ತು. ಆದರೆ ಯಾವ ವಿಷಯದಲ್ಲಿ ಡಿಗ್ರಿ ಅಥವಾ ಪದವಿ ಪಡೆದಿದ್ದಾನೆ ಎಂದು ನನಗೆ ಗೊತ್ತಿಲ್ಲ. ಮೃತ ವಿನಯ್ ರಾಜ್ ಪದವಿದಾರನಾದ ನಂತರ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದನು. ಅದೇ ರೀತಿ ಆತ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ವರ್ಕ್ ಫ್ರಂ ಹೋಮ್ ಆಧಾರದ ಮೇಲೆ ಕೆಲಸ ಮಾಡುತ್ತಿದ್ದನು. ಆದರೆ ಪ್ರತಿ ತಿಂಗಳು ಎಷ್ಟು ವರಮಾನ ಅಥವಾ ವೇತನವನ್ನು ಸಂಪಾದನೆ ಮಾಡುತ್ತಿದ್ದನು ಎಂದು ನನಗೆ ಗೊತ್ತಿಲ್ಲ. ಈ ಕೇಸಿನ ಅರ್ಜಿದಾರರು ನನ್ನನ್ನು ಕುರಿತು ಮೃತ ವಿನಯ್ ರಾಜ್ ನ ವೇತನ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುಬೇಕು ಎಂದು ನನ್ನನ್ನು ಕೇಳಿಕೊಂಡಿರುವುದಿಲ್ಲ.

ಅಪಘಾತವಾದ ದಿನಾಂಕ ನನಗೆ ನೆನಪಿಲ್ಲ. ಅಪಘಾತದ ಬಗ್ಗೆ ನಾನೇ ಸ್ವತಃ ಪೊಲಿಸರಿಗೆ ದೂರು ಕೊಟ್ಟಿರುತ್ತೇನೆ. ಆಗ ಮದ್ಯಾಹ್ನ ಸುಮಾರು 3-00 ರಿಂದ 3-30 ಗಂಟೆಯಾಗಿತ್ತು. ನಾನು ದೂರು ಕೊಟ್ಟ ನಂತರ ಪೊಲೀಸರು ಅಪಘಾತ ಸ್ಥಳಕ್ಕೆ ಬಂದಿದ್ದರು. ಆದರೆ ಎಷ್ಟು ಸಮಯಕ್ಕೆ ಸ್ಥ,ಳಕ್ಕೆ ಬೇಟಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಮೌಖಿಕವಾಗಿ ದೂರಿನ ಬಗ್ಗೆ ಹೇಳಿದ್ದೇನೆ. ನಾನು ಮತ್ತು ಮೃತ ವಿನಯ್ ರಾಜ್ ಹೋಗುತ್ತಿದ್ದ ಡಿಯೋ ಸ್ಕುಟಿ ವಾಹನಕ್ಕೆ ಮೊದಲು ಒಂದು ಅಟೋ ರೀಕ್ಷಾ ಡಿಕ್ಕಿಪಡಿಸಿತ್ತು ಎಂದರೆ ಸರಿ. ಆಗ ನಾನು ಡಿಯೋ ಸ್ಕೂಟಿಯಿಂದ ಎಡಭಾಗಕ್ಕೆ ಬಿದ್ದೆನು ಮತ್ತು ಮೃತ ವಿನಯ್ ರಾಜ್ ಸ್ಕೂಟಿಯ ಬಲಭಾಗಕ್ಕೆ ಬಿದ್ದನು. ಸದರಿ ಅಪಘಾದಲ್ಲಿ ನನ್ನ ಎಡಗಾಲುಮತ್ತು ಎಡಗೈ ಗೆ ತರಚಿದ ಗಾಯಗಳು ಅಗಿದ್ದವು. ಸದರಿ ಡಿಯೋ ಸ್ಕೂಟಿ ವಾಹನದ ನೊಂದಣಿ ಸಂಖ್ಯೆ ನನಗೆ ಸರಿಯಾಗಿ ಗೊತ್ತಿಲ್ಲ. ಅ ದಿನ ನಾನು ಅಪಘಾತ ಸಮಯದಲ್ಲಿ ಮೃತ ವಿನಯ್ ರಾಜ್ ನ ಜೊತೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ನೀಡಿದ್ದ ನಿಪಿ.2 ಹೇಳಿಕೆ ದೂರಿನಲ್ಲಿ " **ವಿನಯ್** ರಾಜ್ ರವರು ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ರಸ್ತೆಯ ಎಡಬದಿಯಲ್ಲಿ ಮದ್ಯಾಹ್ನ 3-30 ಗಂಟೆ ಸಮಯದಲ್ಲಿ ಬೂದಿಕೋಟೆ ಸರ್ಕಲ್ ಬಳಿ ಇರುವ ಅಯಿಲ್ ಅಂಗಡಿಯ ಬಳಿ ಬಂಗಾರಪೇಟೆ ಕಡೆಗೆ ಬರುತ್ತಿದ್ದಾಗ ಬಂಗಾರಪೇಟೆಯಿಂದ ಬೂದಕೋಟೆ ಕಡೆಗೆ ಹೋಗಲು ಯಾವುದೋ ಒಂದು ಅಟೋ ಅತಿವೇಗ ಮತ್ತು ಅಜಾಗರೂಕತೆಯಿಂದಚಲಾಯಿಸಿಕೊಂಡು ಬಂದು ವಿನಯ್ ರಾಜ್ ರವರು ಚಲಾಯಿಸುತ್ತಿದ್ದ ದ್ವಿಚಕ್ರ

ವಾಹನಕಕ್ಕೆ ಡಿಕ್ಕಿ ಪಡಿಸಿದ್ದು, ನಾವು ವಾಹನ ಸಮೇತವಾಗಿ ಕೆಳಗೆ ಬಿದ್ದಾಗ ಬಂಗಾರಪೇಟೆ ಕಡೆಯಿಂದ ಬೂದಿಕೋಟೆ ಕಡೆಗೆ ಹೋಗಲು ಯಾವುದೋ ಕಾರ್ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ರಸ್ತೆಯಲ್ಲಿ ಬಿದ್ದಿದ್ದ ವಿನಯ್ ರಾಜ್ ರವರ ದ್ವಿಚಕ್ರ ವಾಹನಕ್ಕೆ ಕಾರ್ ನ ಚಾಲಕ ಡಿಕ್ಕಿಪಡಿಸಿ ವಿನಯ್ ರಾಜ್ ರವರ ಮೇಲೆ ಕಾರು ಹತ್ತಿಸಿಕೊಂಡು ಆಟೋ ಮತ್ತು ಕಾರ್ ಎರಡೂ ಸ್ಥಳದಿಂದ ಪರಾರಿಯಾಗಿರುತ್ತಾರೆ " - ಎಂಬುದಾಗಿ ಹೇಳಿ ಬರೆಸಿದ್ದೇನೆ ಎಂದರೆ ನಿಜ. ನಿಪಿ.2 ರಂತೆ ದೂರು ಕೊಡುವ ಕಾಲಕ್ಕೆ ಸದರಿ ಆಟೋ ರೀಕ್ಷಾ ಮತ್ತು ಕಾರಿನ ನೊಂದಣಿ ಸಂಖ್ಯೆಗಳನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ಆ ಸಮಯದಲ್ಲಿ ನಾನು ಪೊಲೀಸರ ಮುಂದೆ ಸದರಿ ಆಟೋ ರೀಕ್ಷಾ ಮತ್ತು ಕಾರಿನ ನೊಂದಣಿ ಸಂಖ್ಯೆಗಳನ್ನು ಹೇಳಿರುವುದಿಲ್ಲ. ಅದೇ ರೀತಿ ಅಪಘಾತ ಸಮಯದಲ್ಲಿ ಸದರಿ ಆಟೋ ರೀಕ್ಷಾ ಮತ್ತು ಕಾರಿನ ಚಾಲಕರು ಯಾರು ಇದ್ದರು ಎಂಬ ಬಗ್ಗೆ ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದೇ ಇದುದ್ದರಿಂದ ಆ ಬಗ್ಗೆ ಹೇಳಿರುವುದಿಲ್ಲ ಎನ್ನುತ್ತಾರೆ. ಅಪಘಾತವಾದ ನಂತರ ನಾನು ಮತ್ತು ಅಲ್ಲಿ ಸೇರಿದ್ದ ಜನರು ಕೂಡಿಕೊಂಡು ವಿನಯ್ ರಾಜ್ ನನ್ನು ಒಂದು ಶೇರ್ ಆಟೋ ರೀಕ್ಷಾದಲ್ಲಿ ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಗೆ ಹೋದೆನು. ನಾನು ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದು ಈ ಬಗ್ಗೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ನನ್ನ ಬಳಿ ಇರುವುದಿಲ್ಲ. ಬಂಗಾರಪೇಟೆ ಪೊಲೀಸ್ ಠಾಣೆಯ ಪೊಲೀಸ್ ಪೇದೆಯೊಬ್ಬರು ಕಾರನ್ನು ಪೊಲೀಸ್ ಠಾಣೆ ಬಳಿಗೆ ತಂದಿದ್ದರು. ಆದರೆ ಸದರಿ ಪೊಲೀಸ್ ಪೇದೆಯ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಕಾರನ್ನು ಮಾತ್ರ ಠಾಣೆಗೆ ತೆಗೆದುಕೊಂಡು ಬಂದಿದ್ದು ಆಟೋ ರೀಕ್ಷಾವನ್ನು ತೆಗೆದುಕೊಂಡು ಬಂದಿರಲಿಲ್ಲ.ಸದರಿ ಅಪಘಾತದಲ್ಲಿ ಮೊದಲಿಗೆ ಆಟೋ ರೀಕ್ಷಾ ನಮ್ಮ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದು ಅದರಿಂದನಾವು ಇಬ್ಬರು ಕೆಳಗೆ ಬಿದ್ದಿದ್ದು ಒಂದು ವೇಳೆ, ಆಟೋ ರೀಕ್ಷಾ ಆ ರೀತಿ ಡಿಕ್ಕಿ ಪಡಿಸದೇ ಇದ್ದಿದ್ದರೆ ನಾವು ಕೇಳಗೆ ಬೀಳುತ್ತಿರಲಿಲ್ಲ ಎಂದರೆ ಸರಿ. ಆದ್ದರಿಂದ ಸದರಿ ಅಪಘಾತವು ಆಟೋ ರೀಕ್ಷಾ ಚಾಲಕನ ಅಜಾಗರೂಕತೆ ಮತ್ತು ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ಮೃತನ ಕುಟುಂಬದವರಿಗೆ ಸಹಾಯ ಮಾಡುವ ಸಲುವಾಗಿ ಹಾಗೂ ಹೆಚ್ಚಿನ ಪರಿಹಾರ ಸಿಗಲೀ ಎಂಬ ಕಾರಣಕ್ಕಾಗಿ ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಮಾಡಿದ ಕಾರಿನ ಬಣ್ಣ ಯಾವುದು ಎಂದು ನನಗೆ ಗೊತ್ತಿಲ್ಲ. ಯಾವುದೋ ಬೇರೆ ಕಾರು ನಮ್ಮ ದ್ವಿಚಕ್ರ ವಾಹನಕ್ಕೆ ಅಪಘಾತಪಡಿಸಿದ್ದು ಪೊಲೀಸರು ಸಲ್ಲಿಸಿರುವ ಅಂತಿಮ ದೋಷರೋಪಣಾ ಪಟ್ಟಿಯಲ್ಲಿ ನಮೂದಿಸಿರುವ ಕಾರು ನಮಗೆ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.10 ದೋಷರೋಪಣಾ ಪಟ್ಟಿಯ ಪ್ರಕಾರ ಪೊಲೀಸರು ಆಟೋರಿಕ್ಷಾ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಹಾಗೂ ಕಾರಿನ ಚಾಲಕನ ಅತಿವಗ ಮತ್ತುಅಜಾಗೂಕತೆಯಿಂದ ಅಪಘಾತ

ಉಂಟಾಗಿದೆ ಎಂಬುದಾಗಿ  ವಿವರವಾಗಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ

ಮರು ವಿಚಾರಣೆಃ- ಇರುವುದಿಲ್ಲ

**ದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

**ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd.-

**(ಶಿವಕುಮಾರ.ಬಿ.)**

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)